**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 513/2022**

ಪಿ  ಡಬ್ಲ್ಯೂ-1

**ದಿನಾಂಕ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಡಿ ಆರ್ ಆರ್   ಪ್ರತಿವಾದಿ ಪರ ವಕೀಲರುಃ**

ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ದಿಃ 06-01-2020 ರಂದು ರೂ 1,50,000/- ಹಣವನ್ನು  ಕೆ ಆರ್ ನಗರದ ತಾಲ್ಲೂಕು ಕಚೇರಿಯ ಹತ್ತಿರ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಕುಮಾರಸ್ವಾಮಿ, ಸಾಕ್ಷಿದಾರರಾದ ಯಶವಂತ ಮತ್ತು ರಾಮೇಗೌಡ ಇದ್ದರು. ಸದರಿ ಸಾಲವನ್ನು ಪ್ರತಿವಾದಿ ವ್ಯವಹಾರದ ಸಲುವಾಗಿ ಪಡೆದುಕೊಂಡಿರುತ್ತಾರೆ.

2. ಪ್ರತಿವಾದಿ ಸದರಿ ಹಣವಕ್ಕೆ ಮಾಸಿಕ  ಶೇಕಡಾ 2% ಬಡ್ಡಿಯ ಹಣವನ್ನು ನೀಡುವುದಾಗಿ ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿ ಪತ್ರಕ್ಕೆ ಆಂಗ್ಲ ಭಾಷೆಯಲ್ಲಿಸಹಿಯನ್ನು ಮಾಡಿರುತ್ತಾರೆ. ಸದರಿ ಪತ್ರದಲ್ಲಿ ಸಾಕ್ಷಿದಾರರ ವಿಳಾಸವನ್ನು ನಮೂದು ಮಾಡಿಲ್ಲ ಎಂದರೆ ಸರಿ. ವಿಳಾಸವನ್ನು ನಮೂದು ಮಾಡಲು ತೊಂದರೆ ಇರಲಿಲ್ಲ. ನಾನು ಯಾವ ಮುಖಬೆಲೆಯ ನೋಟುಗಳನ್ನು ಪ್ರತಿವಾದಿಗೆ  ನೀಡಿದ್ದೇನೆ ಎಂದು ನನಗೆ ನೆನಪಿಲ್ಲ.

**3**. ಹಣವನ್ನು ಪಾವತಿ ಮಾಡಿದ 1  ರಿಂದ 1 ½ ತಿಂಗಳ ಹಿಂದೆ ಪ್ರತಿವಾದಿ  ಹಣವನ್ನು ಕೇಳಿದ್ದರು. ಸದರಿ ಪತ್ರವನ್ನು ಶಿವಪ್ರಕಾಶ ಬರೆದಿರುತ್ತಾರೆ. ಸಾಕ್ಷಿದಾರರು ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣವನ್ನು ನೀಡಿದ ನಂತರ  ಪತ್ರವನ್ನು ಬರೆಸಿಕೊಂಡಿರುತ್ತೇವೆ. ನಿಪಿ 1 ರಲ್ಲಿ  ಸಾಕ್ಷಿದಾರರ ಸಂಪೂರ್ಣ ವಿಳಾಸವನ್ನು ಬರೆಯಲು ಸ್ಥಳಾವಕಾಶ ಇಲ್ಲದ ಕಾರಣ ನಮೂದು ಮಾಡಿಲ್ಲ ಎಂದರೇ ಸರಿ

**4**. ಮೊದಲು ಸಹಿಯನ್ನು ಪಡೆದುಕೊಂಡ ನಂತರ ಪತ್ರವನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಬಡ್ಡಿಯ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಹಣಕಾಸಿನ ವ್ಯವಹಾರವನ್ನು ಮಾಡಲು ಪರವಾನಿಗೆಯನ್ನು ಪಡೆದಿಲ್ಲ ಎಂದರೆ ಸಾಕ್ಷಿ ಮುಂದುವರೆದು ನಾನು ಯಾವುದೇ ಲೇವಾದೇವಿ ವ್ಯವಹಾರವನ್ನು ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಇದೇನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ  ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ